

"ಸಾಮಾನ್ ಮೀನು ಬೆಂದು ಬರುವುದರೊಳಗೆ ಬೇರೆ ಏನಾದರೂ ಬೇಕೇ ಮೇಡಮ್?" ವಿನೀತಭಾವದಿಂದ ಕತ್ತನ್ನು ಓರೆಯಾಗಿಸುತ್ತಾ ನಮ್ರತೆಯಿಂದ ವೇಯ್ಟರ್ ಕೇಳಿದ.

'ಓಹ್! ಬೇಡ ಮಾರಾಯಾ ಬೇಡ! ನಾನೇನೂ ಕಸದ ಡಬ್ಬಿ ಅಂತ ಅಂತ್ಕೊಂಡಿದಿಯಾ?" ಅಂತ ಆಕೆ ಸಹಜವಾಗಿ ಉದ್ಗರಿಸುತ್ತಾ, ಹಠಾತ್ತನೆ ನೆನಪಾದವಳಂತೆ, "ನಿಮ್ಮಲ್ಲೇನಾದರೂ (ತುಟಿಗಳನ್ನು ವ್ಯಂಗ್ಯದಿಂದೆಂಬಂತೆ ಕೊಂಕಾಗಿಸುತ್ತಾ) ಕ್ಯಾವಿಯರ್ (**Caviar:** ಒಂದು ವಿಶಿಷ್ಟ ಜಾತಿಯ ಮೀನಿನ ದುಬಾರಿ ಮೊಟ್ಟೆಗಳು) ಇದ್ದಲ್ಲಿ ನಾನು ನನ್ನ ಉಪವಾಸನ್ನು ಮುರಿಯಲು ತಯಾರಿದ್ದೇನೆ." ಎಂದಳು.

ನನ್ನ ಹೃದಯ ತಾಳ ತಪ್ಪಿದಂತೆ ಬಡಿದುಕೊಳ್ಳಲಾರಂಭಿಸಿತು. ಕ್ಯಾವಿಯರ್ ನನ್ನ ಸಾಮರ್ಥ್ಯದ ಹೊರಗಿನದೆಂದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೂ ಆಕೆಯ ಎದುರಿಗೆ ಹೇಳಿ ಸಣ್ಣವನಾಗಲು ನಾನು ತಯಾರಿರಲಿಲ್ಲ... ಕ್ಯಾವಿಯರ್ ತರಲು ನಾನು ವೇಯ್ಟರನಿಗೆ ಕೈ ಸನ್ನೆ ಮಾಡಿದೆ.

ನಾನು ಮೆನು ಕಾರ್ಡನ್ನು ಗಮನವಿಟ್ಟು ನೋಡುತ್ತಾ, ನನಗಾಗಿ ಎಲ್ಲಕ್ಕಿಂತಲೂ ಕಡಿಮೆ ಬೆಲೆಯ ಮಟನ್ ಚಾಪ್ಸ್ ಆರ್ಡರ್ ಮಾಡಿದೆ.

"ನೀವು ಮಟನ್ ಚಾಪ್ಸನ್ನು ಆರ್ಡರ್ ಮಾಡಿ ಬಹಳ ದೊಡ್ಡ ತಪ್ಪೆಸಗಿದ್ದೀರಿ." ಮೂಗನ್ನು ಮುರಿಯುತ್ತಾ ನನ್ನ ಅಭಿಮಾನಿ ಆಕ್ಷೇಪಿಸಿದಳು. "ಮಧ್ಯಾಹ್ನದ ಊಟ ತುಂಬಾ ತುಂಬಾ ಲೈಟಾಗಿರಬೇಕು. ನನ್ನದಂತೂ ಯಾವತ್ತೂ ತುಂಬಾ ಲೈಟು. ಚಾಪ್ಸನ್ನು ತಿಂದು ನೀವು ಹೇಗೆ ಕೆಲಸ ಮಾಡುತ್ತೀರಿ ಅನ್ನುವುದೇ ಸೋಜಿಗ!"